# ಬಿ.ಎಸ್ಸಿ ಫ್ಯಾಡ್ ಮತ್ತು ಐಡಿಡಿ
# ಪ್ರಥಮ ಸೆಮಿಸ್ಟರ್



## ಪರಿವಿಡಿ


### I.ಕಾವ್ಯ ಭಾಗ

೧. ಸೋರ್ದುದು ಕೊಳಗೊಂಡ ಗರ್ವರಸಂ – ಪಂಪ ೧–೪

೨. ವಚನಗಳು – ದೇವರದಾಸಿಮಯ್ಯ, ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ ೫–೮

೩. ಬಾರೋ ಸಾಧನಕೇರಿಗೆ – ಅಂಬಿಕಾತನಯದತ್ತ ೯–೧೧

೪. ಪ್ರೀತಿ ಇಲ್ಲದ ಮೇಲೆ – ಜಿ.ಎಸ್. ಶಿವರುದ್ರಪ್ಪ ೧೨–೧೩

### II . ಕಥಾ ಸಾಹಿತ್ಯ

೧. ಕೊನೆಯ ಗಿರಾಕಿ – ನಿರಂಜನ ೧೪–೨೩

೨. ತಾಯಿ – ಯು.ಆರ್. ಅನಂತಮೂರ್ತಿ ೨೪–೩೨

೩. ಕುಬುಸ –ಕುಂ. ವೀರಭದ್ರಪ್ಪ ೩೩–೪೮

### III .ಜಾನಪದ

೧. ಹೂ ಬಿಡುವ ಮರ – (ಸಂ) ಎ.ಕೆ. ರಾಮಾನುಜನ್
– ಭಾರತೀಯ ಜನಪದ ಕತೆಗಳು ೪೯–೬೨

೨. ಸಂಗೊಳ್ಳಿ ರಾಯಣ್ಣನ ದಂಗೆ (ಲಾವಣಿ)
– ಸಂಗ್ರಹ: ಕಿ.ರಂ. ನಾಗರಾಜ ಬಸವರಾಜಕಲ್ಗುಡಿ ೬೩–೭೩

೩. ಮಾದಪ್ಪನ ಕತೆಯ ಸುತ್ತಮುತ್ತ – ಓ.ಎಲ್. ನಾಗಭೂಷಣಸ್ವಾಮಿ ೭೪–೮೬

### IV . ಲೇಖನ ವೈವಿಧ್ಯ

೧. ಹೆಣ್ಣಿನ ಸ್ಥಾನಮಾನ – ಶರಚ್ಚಂದ್ರ ಚಟ್ಟೋಪಾಧ್ಯಾಯ
ಅನು : ಸಿದ್ಧಲಿಂಗ ಪಟ್ಟಣಶೆಟ್ಟಿ ೮೭–೧೦೨

೨. ಇಂಡಿಯಾದ ದೇವಪುರುಷರು – ಡಾ. ಅಬ್ರಹಾಂ ಟಿ. ಕೋವೂರ್
ಅನು : ಕೆ ಮಾಯಿಗೌಡ. ೧೦೩–೧೦೯

೩. ಮೊಲೆ ಮುಡಿ ಬಂದರೆ ಹೆಣ್ಣೆಂಬರು
– ಡಾ. ಎಚ್.ಎಸ್. ಶ್ರೀಮತಿ ೧೧೦–೧೨೦

# I ಕಾವ್ಯ ಭಾಗ

## ೧. "ಸೋರ್ದುದು ಕೊಳಗೊಂಡ ಗರ್ವರಸಂ"

**– ಪಂಪ**

**ಆಶಯ :**

ಭರತನ ಆಯುಧಾಗಾರದಲ್ಲಿ ಹುಟ್ಟಿದ ಚಕ್ರರತ್ನದಿಂದ ಅಧಿಕಾರ ದಾಹದ ಅಹಂಕಾರ, ಔದ್ಧತ್ಯ, ಆತ್ಮವಿಶ್ವಾಸವು ಹೆಚ್ಚಾಗಿ ಷಟ್‌ಖಂಡ ಮಂಡಲ ದಿಗ್ವಿಜಯವನ್ನು ಸಾಧಿಸಿದ ಭರತ, ತಾನೇ ದಿಗ್ವಿಜಯ ಮಾಡಿದ ಪ್ರಥಮ ಚಕ್ರವರ್ತಿಯೆಂಬ ಹೆಮ್ಮೆಯಿಂದ ವೃಷಭಾಚಲದ ವಿಜಯಾರ್ಧ ಪರ್ವತದ ಶೀಲಾಭಿತ್ತಿಯಲ್ಲಿ ತನ್ನ ಹೆಸರನ್ನು ಕೆತ್ತಿಸ ಬಯಸುತ್ತಾನೆ. ಆದರೆ ಅವನಿಂದ ಮೊದಲೇ ದಿಗ್ವಿಜಯ ಸಾಧಿಸಿದವರ ಅಸಂಖ್ಯಾತ ಹೆಸರುಗಳು ಅಲ್ಲಿದ್ದು, ಭರತನ ಹೆಸರು ಕೆತ್ತಲು ಜಾಗವೇ ಇರುವುದಿಲ್ಲ. ವಿಶ್ವ ವಿಜಯಿಯಾದವನು ಭರತನೊಬ್ಬನೇ ಅಲ್ಲ, ಹಿಂದಿನ ದೊರೆಗಳೆಲ್ಲ ದಿಗ್ವಿಜಯಮಾಡಿ ವಿಜೃಂಭಿಸಿ ಇಂದು; ಹೇಳ ಹೆಸರಿಲ್ಲದಂತೆ ಮಣ್ಣಾದರು. ಅವರ ಸಾಧನೆಯ ಕ್ಷಣಿಕತೆ–ನಿಷ್ಫಲತೆಯ ಸತ್ಯವಂತ ಭರತನಲ್ಲಿ ಮಡುಗಟ್ಟಿದ ಅಹಂಕಾರ–ಗರ್ವರಸ ಸೋರಿ ಭ್ರಮನಿರಸವಾದರೂ ಒಪ್ಪಿಕೊಳ್ಳದ ಮನುಷ್ಯ ಸ್ವಭಾವಕ್ಕೆ ಭರತ ಒಂದು ಪ್ರತಿಮೆ. ಈ ಘಟನೆ ಅವನ ಜೀವನದ ಪತನದ ಬಿಂದುವಾದರೂ, ಭರತ ಅಲ್ಲಿರುವ ಹಳೆಯ ಹೆಸರೊಂದನ್ನು ಅಳಿಸಿ ಅದರ ಮೇಲೆ ತನ್ನ ಹೆಸರನ್ನು ಕೆತ್ತಿಸುವುದರ ಮೂಲಕ ಅರ್ಥಹೀನ ಕೀರ್ತಿ, ಪ್ರತಿಷ್ಠೆ, ಅಮರತ್ವದ ಮೋಹಕ್ಕೆ ಜ್ವಲಂತ ನಿದರ್ಶನವಾಗುತ್ತಾನೆ.

ವ॥ ಅಂತು ತದ್ಗಿರೀಂದ್ರಮಧ್ಯಮಕೂಟದಿಂದಂ ಸಯ್ತು ತೆಂಕಮೊಗದೆ ಬಂದು ವೃಷಭಾಚಳಮಂ ಕಂಡಂ. ಅದು ಯೋಜನಶತಮೂಲವಿಸ್ತೃತಮುಂ ತಾವತ್ಪ್ರಮಾಣೋತ್ಸೇಧಮುಂ ತದರ್ಧಪ್ರಮಿತೋಪರಿಮತಳವಿಸ್ತಾರಮುಂ ಪಂಚವಿಶಂತಿಶತ ಯೋಜನಾವಗಾಹಮುಮಾಗಿ ಸಂದುತ್ತರಭರತ ಮಧ್ಯಮಖಂಡದ ನಟ್ಟನಡುವಣೆಡೆಯೊಳ್ ಅತಿಕ್ರಾಂತಾನೇಕಚಕ್ರವರ್ತಿಗಳ ವಿಶದಯಶಃಪುಂಜಮುಮಂ ವಿಜಯಲಕ್ಷ್ಮೀ



ಮುಖವಿಳೋಕನಮಂಗಳಮಣಿದರ್ಪಣಶ್ರೀಯುಮಂ ತನ್ನೊಳಳವಡಿಸಿ,

ಕುವಲಯಪಾಂಡುರಂ ಕನಕಪಂಕಜಷಂಡವಿರಾಜಿ ಕೇಕಿತಾಂ
ಡವರಮಣೀಯಕಲ್ಪಲತಿಕಾವನಮುನ್ಮ ದಭೃಂಗಮಾಳಿಕಾ ।
ರವಮುಖರೀಕೃತಾಮ್ರವನಶೋಭಿತಮಾಶ್ರಿತದಿವ್ಯಸೌಂದರೀ
ನಿವಹನಿಕೀರ್ಣಚಂಪಕವನಂ ಕರಮೊಪ್ಪು ಗುಮಾ ಮಹೀದರಂ॥

ವ॥ ಆ ವೃಷಭಾದ್ರಿಯ ಮೇಖಳಾಶಿಲಾಭಿತ್ತಿಯೊಳ್ ಆತ್ಮೀಯ ವಿಶ್ವವಿಶ್ವಂಭರಾ ವಿಜಯಪ್ರಶಸ್ತಿ ಯನಟ್ಟೆಯೊಳ್ ಬರೆಯಿಸುವೆನೆಂದು ಪೋಗಿ ನೋಡುವನ್ನೆಗಂ,

ಅದಱೊಳನೇಕಕಲ್ಪಶತಕೋಟಿಗಳೊಳ್ ಸಲೆ ಸಂದ ಚಕ್ರಿವೃಂ
ದದ ಚಲದಾಯದಾಯತಿಯ ಬೀರದ ಚಾಗದ ಮಾತುಗಳ್ ಪೊದ।
ಱ್ದೊದವಿರೆ ತತ್ಪ್ರಶಸ್ತಿಗಳೊಳಂತವನೊಯ್ಯನೆ ನೋಡಿ ನೋಡಿ ಸೋ
ರ್ದುದು ಕೊಳಗೊಂಡ ಗರ್ವರಸಮಾ ಭರತೇಶ್ವರಚಕ್ರವರ್ತಿಯಾ ॥

ವ॥ಅಂತು ಗಳಿತಗರ್ವನಾಗಿ ಸಿಗ್ಗಾಗಿ ಪೂರ್ವಾವನಿಪಾಳ ಪ್ರಶಸ್ತಿಯೊಳೊಂದೊಂದಂ ದಂಡರತ್ನದಿಂ ಸೀಂಟಿ ಕಳೆದು ನಿಜಪ್ರಶಸ್ತಿಗೆಡೆಮಾಡಿ,

ಸ್ವಸ್ತಿ ಸಮಸ್ತನರೇಶ್ವರ
ಮಸ್ತಕವಿನ್ಯಸ್ತಶಾಸನಂ ಸಕಲಜಗ।
ದ್ವಿಸ್ತಾರಿತಯಶನನ್ವಯ
ವಿಸ್ತಾರಕನಾದಿದೇವನಗ್ರತನೂಜಂ॥

ಭುವನವಿಶೇಷಕನಿಕ್ಷ್ವಾ
ಕುವಂಶಗಗನೇಂದು ಚಕ್ರರತ್ನಾಧೀಶಂ।
ನವನಿಧಿವಲ್ಲಭನಾನತ
ದಿವಿಜಗಣಂ ನೆಗಟ್ದಿ ನಾಭಿರಾಜನ ಮೊಮ್ಮಂ॥

ಅವನ ದಿಗ್ವಿಜಯದೊಳೈ
ರಾವತಗಜನಿಭಜಂಗುಳಿಂ ಭುವನತಳಂ।
ತೀವಿದುದಾವನ ಸೈನ್ಯದೊ
ಳಾವರಿಸಿದ ಧೂಳಿ ಪೊಟ್ಟುದಂಭೋನಿಧಿಯಂ॥

ವೇಳಾವನಂಗಳುಂ ಕು
ತ್ಕೀಳಂಗಳುಮಾವ ನೃಪನ ಪಡೆ ನಡೆವೆಡೆ ನಿ।
ರ್ಮೂಳಂಗಳಾದುವಾವನ
ತೋಳಿಂ ನಿರ್ಮಿರ್ದತ್ತು ಜಳಧಿವರಮವನಿತಳಂ॥

ದೇವಾಂಗನೆಯರ್ ಪಾಡುವ
ರಾವನ ಜಸಮಂ ಕುಳಾಚಳಾವಳಿಯೊಳ್ ಶೌ।
ರ್ಯಾವಷ್ಟಂಭದಿನಾಳ್ದವ
ನಾವಂ ಷಟ್ಖಂಡಮಂಡಿತಕ್ಷಿತಿತಳಮಂ॥

ಆತಂ ಭರತೇಶ್ವರನಿಂ
ತೀ ತೆಱದಿಂ ನೆಗಟ್ದ ತನ್ನ ಕೀರ್ತಿಯನೀ ವಿ।
ಖ್ಯಾತವೃಷಭಾದ್ರಿಯೊಳ್ ಸುರ
ಗೀತಯಶಂ ನಿಱಿಸಿದಂ ನೆಲಂ ನಿಲ್ವಿನೆಗಂ॥

## ಕವಿ ಪರಿಚಯ

**ಪಂಪ :** ಈ ಪಠ್ಯಭಾಗವನ್ನು ಕನ್ನಡದ ಆದಿಕವಿ ಮತ್ತು ಅಗ್ರಕವಿಯಾದ ಪಂಪನ 'ಆದಿಪುರಾಣ'ದಿಂದ ಆರಿಸಲಾಗಿದೆ. ೧೦ನೇ ಶತಮಾನದ ಪೂರ್ವಾರ್ಧದಲ್ಲಿ, ಕಾವ್ಯರಚಿಸಿದ ಪಂಪ ಅರಿಕೇಸರಿಯ ಆಶ್ರಯವನ್ನು ಪಡೆದಿದ್ದನು. ಕವಿ ಹಾಗೂ ಕಲಿಯೂ ಆಗಿದ್ದ 'ಪಂಪ' ಲೌಕಿಕ ಹಾಗೂ ಆಗಮಿಕ ಎಂಬ ಕಾವ್ಯ ಮಾರ್ಗಗಳನ್ನು ನಿದರ್ಶಿಸುವಂತೆ ವಿಕ್ರಮಾರ್ಜುನ ವಿಜಯ ಮತ್ತು ಆದಿಪುರಾಣ ಕೃತಿಗಳನ್ನು ರಚಿಸಿದ್ದಾನೆ. ಧರ್ಮ ಮತ್ತು ಕಾವ್ಯಧರ್ಮ ಸಮನ್ವಯ, ಮಾರ್ಗದೇಸಿಗಳ ಸಮನ್ವಯವನ್ನು ಅಭಿವ್ಯಕ್ತಿಯ ಶೈಲಿಯಲ್ಲಿ ಸಮರ್ಥವಾಗಿ ನಿರ್ವಹಿಸಿದ ಪಂಪ ಚಂಪೂಕಾವ್ಯ ಪರಂಪರೆಗೆ ಮಾರ್ಗದರ್ಶಿಯಾದವನು.



ವಿಭಿನ್ನ ಕಥನ, ಭಾವಗಳ ವರ್ಣನೆಗಳಿಗೆ ಗದ್ಯ–ಪದ್ಯ ಮಿಶ್ರಿತವಾದ ಶೈಲಿಯನ್ನು ಕನ್ನಡಕ್ಕೆ ವಿಶಿಷ್ಟವಾದ ಚಂಪೂಕಾವ್ಯ ಮಾರ್ಗವನ್ನು ಅಭಿವ್ಯಕ್ತಿಯಲ್ಲಿ ಅನುಸರಿಸುವುದರ ಮೂಲಕ ಮುಂದಿನ ಜೈನ ಕವಿಗಳಿಗೆ ಮಾದರಿಯಾಗಿದ್ದಾನೆ.

ಚಂಪೂ: ಕಂದಪದ್ಯ, ವೃತ್ತ ಹಾಗೂ ಗದ್ಯದಿಂದ ಕೂಡಿದ್ದು, ಹಲವು ಛಂದೋ ಪ್ರಕಾರಗಳಿಂದ ಪರಿಮಿಶ್ರಿತವಾದ ರೂಪ.

### ಕಠಿಣ ಪದಗಳ ಅರ್ಥ :

ಗಿರೀಂದ್ರ–ಹಿಮವತ್ ಪರ್ವತ, ಸಯ್ತು–ನೇರವಾಗಿ, ಅವಗಾಹ–ಆಳ, ಉತ್ಸೇಧ–ಎತ್ತರ, ಪಂಚವಿಂಶತಿ–ಇಪ್ಪತ್ತೈದು, ಆಮ್ರ–ಮಾವು, ಅಳ್ತಿ–ಪ್ರೀತಿ, ಬಯಕೆ, ಆಯತಿ–ಪರಾಕ್ರಮ, ಉನ್ನತಿ, ಕೊಳಗೊಂಡ–ತುಂಬಿಕೊಂಡ, ಮಡುಗಟ್ಟಿದ, ಗಳಿತಗರ್ವ, ಅಹಂಕಾರ ಕಳೆದುಕೊಳ್ಳುವುದು, ಸಿಗ್ಗು–ನಾಚಿಕೆ, ತೊಡೆದುಹಾಕು–ಅಳಿಸಿಹಾಕು.

### ಪ್ರಶ್ನೆಗಳು :

೧. ದಿಗ್ವಿಜಯ ಸಾಧನೆಯು ಕ್ಷಣಿಕ– ನಿಷ್ಫಲವಾದ ಬಗೆ ಹೇಗೆ ತಿಳಿಸಿ.

೨. ಭರತ–ಅರ್ಥಹೀನ ಕೀರ್ತಿ ಪ್ರತಿಷ್ಠೆಗಳಿಗೆ ಜ್ವಲಂತ ನಿದರ್ಶನ ಹೇಗೆ ವಿವರಿಸಿ.

೩. ಭರತ ಮನುಷ್ಯ ಸ್ವಭಾವಕ್ಕೆ ಒಂದು ಪ್ರತಿಮೆ ವಿವರಿಸಿ.

*

# ೨. ವಚನಗಳು

**ಆಶಯ :**

'ವಚನ' ಎನ್ನುವುದು ಸಂಸ್ಕೃತ ಪದ. ಈ ಪದಕ್ಕೆ 'ಮಾತು' ಮಾತನಾಡುವುದು ಎಂಬ ಅರ್ಥಗಳಿವೆ. ಕನ್ನಡದಲ್ಲಿ 'ವಚನ' ಎಂಬ ಪದಕ್ಕೆ 'ಪ್ರಮಾಣೀಕರಿಸಿದ್ದು' 'ಆಣೆ' 'ಗದ್ಯ' ಎನ್ನುವ ಅರ್ಥಗಳೂ ಇವೆ. ಮೌಖಿಕವಾಗಿ ಶರಣರು ನುಡಿ, ಸೂಳ್ನುಡಿ, ಪದ, ಹಾಡು, ಸ್ವಾನುಭವದಿಂದ ಮೂಡಿ ಬಂದ ಮಾತು, ಶಾಸ್ತ್ರ ಲಕ್ಷಣ ಪ್ರಮಾಣಕ್ಕಿಂತ ಅನುಭಾವ ಪ್ರಮಾಣದ ಸತ್ಯದ ನುಡಿ, ಜೀವನದ ಅನುಭಾವ ಹರಳುಗಟ್ಟಿದ ಬೆಳಕಿನ ಬೀಜಗಳು, ಹೀಗೆ ವಚನಗಳು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿದೆ.

### ದೇವರ ದಾಸಿಮಯ್ಯ

ಸಾಗರದೊಳಗಣ ಕಿಚ್ಚಿನ ಸಾಕಾರದಂತೆ
ಸಸಿಯೊಳಗಣ ಫಲಪುಷ್ಪಂಗಳ ರುಚಿ ಪರಿಮಳದಂತೆ
ಮನದ ಮಱೆಯ ಮಾತು ನೆನಹಿನಲ್ಲಿಱದು
ನಾಲಗೆ ನುಡಿವಾಗಲಲ್ಲದೆ–ಕಾಣಬಾರದು ಕೇಳಬಾರದು
ಒಂದಂಗದೊಳಡಗಿದ ನೂಱೊಂದಱ ಪರಿ ರಾಮನಾಥ.

ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದಡೆ
ವಿಷವೇರಿತ್ತಯ್ಯ ಆಪಾದಮಸ್ತಕಕ್ಕೆ !
ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ವಸುಧೆಯೊಳಗಾತನೇ ಗಾರುಡಿಗ ಕಾಣಾ ರಾಮನಾಥ.

### ಅಲ್ಲಮಪ್ರಭು

ಬೆಲ್ಲದ ಪುತ್ಥಳಿಯ ಕೈಯಲ್ಲಿ ಹಿಡಿದು
ಎಲ್ಲಿ ಚುಂಬಿಸಿದಡೂ ಇನಿದು.
ಒಳ್ಳೆಯ ಬೇವಿನ ಹಣ್ಣ ಮೆಲ್ಲನೆ ಚುಂಬಿಸಿದಡೆ ಇನಿದಹುದೆ?



ಎಲ್ಲ ವಿದ್ಯೆವನೂ ಬಲ್ಲೆವೆಂದೆಂಬರು;
ಅವರು ಸಲ್ಲದೆ ಹೋದರಯ್ಯಾ ಗುಹೇಶ್ವರಾ!

ಕೆಂಡದ ಮಳೆ ಕರೆವಲ್ಲಿ ಉದಕವಾಗಿರಬೇಕು,
ಜಲಪ್ರಳಯವಾದಲ್ಲಿ ವಾಯುವಿನಂತಿರಬೇಕು,
ಮಹಾಪ್ರಳಯವಾದಲ್ಲಿ, ಆಕಾಶದಂತಿರಬೇಕು,
ಜಗತ್ಪ್ರಳಯವಾದಲ್ಲಿ ತನ್ನ ತಾ ಬಿಡಬೇಕು
ಗುಹೇಶ್ವರಲಿಂಗ ತಾನಾಗಿರಬೇಕು.

### ಬಸವಣ್ಣ

ಹರಿವ ಹಾವಿಗಂಜೆ, ಉರಿಯ ನಾಲಗೆಗಂಜೆ,
ಸುರಗಿಯ ಮೊನೆಗಂಜೆ!
ಒಂದಕ್ಕಂಜುವೆ, ಒಂದಕ್ಕಳುಕುವೆ;
ಪರಸ್ತ್ರೀ ಪರಧನವೆಂಬ ಜೂಬಿಂಗಂಜುವೆ!
ಮುನ್ನಂಜದ ರಾವಣನೇವಿಧಿಯಾದ!
ಅಂಜುವೆನಯ್ಯಾ ಕೂಡಲಸಂಗಮದೇವಾ.

ವ್ಯಾಧನೊಂದು ಮೊಲನ ತಂದರೆ,
ಸಲುವ ಹಾಗಕ್ಕೆ ಬಿಲಿವರಯ್ಯಾ.
ನೆಲನಾಳ್ದನ ಹೆಣನೆಂದರೆ,
ಒಂದಡಕೆಗೆ ಕೊಂಬರಿಲ್ಲ ನೋಡಯ್ಯಾ!
ಮೊಲನಿಂದ ಕಡುಕಷ್ಟ ನರನ ಬಾಳುವೆ!
ಸಲೆ ನಂಬೋ ನಮ್ಮ ಕೂಡಲಸಂಗಮದೇವನ.

### ಅಕ್ಕಮಹಾದೇವಿ

ಚಂದನವ ಕಡಿದು ಕೊರೆದು ತೇದೊಡೆ
ನೊಂದೆನೆಂದು ಕಂಪ ಬಿಟ್ಟಿತ್ತೆ?
ತಂದು ಸುವರ್ಣ ಕಡಿದೊರೆದೊಡೆ ಬೆಂದು ಕಳಂಕ ಹಿಡಿದಿತ್ತೆ?
ಸಂದು ಸಂದನು ಕಡಿದು ಕಬ್ಬನು ತಂದು ಗಾಣದಲಿಕ್ಕೆ ಅರೆದಡೆ
ಬೆಂದು ಪಾಕಗೂಳ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಿತ್ತೇ?

ನಾಹಿಂದೆ ಮಾಡಿದ ಹೀನಂಗಳೆಲ್ಲ ತಂದು ಮುಂದಿಳುಹಲು
ನಿಮಗೆ ಹಾನಿ!
ಎನ್ನ ತಂದೆ ಚೆನ್ನಮಲ್ಲಿಕಾರ್ಜುನದೇವಯ್ಯ,
ಕೊಂದೊಡೆ ಶರಣೆಂಬುದು ಮಾಣೆ.

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಂಗಳಿಗಂಜಿದಡೆಂತಯ್ಯ?
ಸಮುದ್ರದ ತಡಿಯಲೊಂದು ಮನೆಯಮಾಡಿ
ನೊರೆತೆರೆಗಳಿಗಂಜಿದಡೆಂತಯ್ಯ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ಧಕ್ಕೆ ನಾಚಿದಂಡೆಂತಯ್ಯ?
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿ–ನಿಂದೆಗಳು ಬಂದರೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು!

## ವಚನಕಾರರ ಪರಿಚಯ

**ಜೇಡರ ದಾಸಿಮಯ್ಯ:** ೧೨ನೇ ಶತಮಾನದ ಪೂರ್ವಾರ್ಧದಲ್ಲಿದ್ದ ಹಿರಿಯ ವಚನಕಾರ ಹಾಗೂ ಶಿವಶರಣ. ಸುರಪುರ ತಾಲ್ಲೂಕಿನ ಮುದನೂರು ಜನ್ಮಸ್ಥಳ. ವೃತ್ತಿ ನೇಯ್ಗೆ, ಹೆಂಡತಿ ದುಗ್ಗಳೆ. ರಾಮನಾಥ ಈತನ ಆರಾಧ್ಯದೈವ. 'ರಾಮನಾಥ' ಈತನ ಅಂಕಿತ. ೧೪೨ ವಚನಗಳು ಸಿಕ್ಕಿವೆ.

**ಅಲ್ಲಮಪ್ರಭು:** ಅಲ್ಲಮನ ಅಂಕಿತ 'ಗುಹೇಶ್ವರ'. ಜನನ ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯಲ್ಲಿ. ಶರಣ ಚಳುವಳಿಯ ಮಾರ್ಗದರ್ಶಕ, ಗುರು. ಅನುಭವ ಮಂಟಪದ ಅಧ್ಯಕ್ಷ. ಶೂನ್ಯ ಸಿಂಹಾಸನದ ದೊರೆ. ಈತನು ಢಾಂಬಿಕತೆ, ಅಂಧಶ್ರದ್ಧೆ, ಬಾಹ್ಯಾಡಂಬರ, ಅಜ್ಞಾನ, ಅಸತ್ಯ, ವಿಕಾರಗಳಿಗೆ ಬದ್ಧ ನಿಷ್ಠೂರಿ. ಬಸವಣ್ಣನ ವಿಚಾರ ಕ್ರಾಂತಿಗೆ ತನ್ನ ಜ್ಞಾನದ ಶಕ್ತಿ–ವೈರಾಗ್ಯದ ಕಾಂತಿಯನ್ನಿತ್ತು ಮುನ್ನಡೆಸಿದವನು.

**ಬಸವಣ್ಣ:** (ಕ್ರಿ.ಶ.೧೧೩೧) ಜನನ ಬಿಜಾಪುರ ಜಿಲ್ಲೆಯ ಬಾಗೇವಾಡಿ ಜನ್ಮಸ್ಥಳ. ತಂದೆ ಮಾದಿರಾಜ, ತಾಯಿ ಮಾದಾಂಬೆ. ಪ್ರಮುಖ ಶಿವಶರಣ, ವಚನಕಾರ ಬಿಜ್ಜಳನ ಭಂಡಾರದ ಮಂತ್ರಿ–ಭಕ್ತಿ ಭಂಡಾರಿ. ಸಮಾಜ ಸುಧಾರಕ, ಆಧ್ಯಾತ್ಮಿಕ ದೃಷ್ಟಿಯ ಕ್ರಾಂತಿಕಾರಕ ಬದಲಾವಣೆಯ ಕಾರಣೀ ಪುರುಷ. 'ಕೂಡಲಸಂಗಮ'



ಇವರ ಅಂಕಿತ. ಬೌದ್ಧಿಕ ವಿಕಾಸಕ್ಕೆ, ವೈಚಾರಿಕತೆಗೆ–ಧಾರ್ಮಿಕ ಸ್ವಾತಂತ್ರ್ಯಕ್ಕೆ–ಆಧ್ಯಾತ್ಮಿಕ ಪ್ರಗತಿಯೇ ತಳಹದಿಯೆಂದು ಬಾಳಿದವನು.

**ಅಕ್ಕಮಹಾದೇವಿ:** ಅಕ್ಕಮಹಾದೇವಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಉಡುತಡಿ ಜನ್ಮಸ್ಥಳ. ಶ್ರೇಷ್ಠ ಶಿವಶರಣೆ. 'ಚನ್ನಮಲ್ಲಿಕಾರ್ಜುನ' ಅಂಕಿತವುಳ್ಳವಳು. 'ಯೋಗಾಂಗ ತ್ರಿವಿಧಿ' ಅಕ್ಕನ ಪ್ರಮುಖ ಕೃತಿ. ಮೊದಲು ಬಲವಂತವಾಗಿ ವರಿಸಿದ ಕೌಶಿಕನನ್ನು ತ್ಯಜಿಸಿ, "ಚನ್ನಮಲ್ಲಿಕಾರ್ಜುನ" ನನ್ನು ವರಿಸಿದಳು. ಪುರುಷ ಪ್ರಧಾನ ಸಮಾಜ, ನೀತಿಯನ್ನು ಧಿಕ್ಕರಿಸಿದಳು.

ಅಕ್ಕನ ವಚನಗಳ ಗುಣ, ವೇದನೆ–ನಿವೇದನೆ, ಸಮಾಜ ವಿಮರ್ಶೆಗಿಂತ ಸ್ವವಿಮರ್ಶೆಯೇ ಹೆಚ್ಚು, ಸಂಬೋಧಿಸುವ ಹೊಸ ಸಂಸ್ಕೃತಿಯನ್ನು, ಸ್ತ್ರೀಸಂವೇದನಾ ಸಾಹಿತ್ಯದ ಮೊದಲ ಕವಿಯತ್ರಿ. ತೀ.ನಂ.ಶ್ರೀ ಹೇಳುವಂತೆ "ಅವಳ ವಚನಗಳು ರಸಾರ್ದ್ರವಾಗಿದ್ದು, ಉಪಮಾನ–ಚಿತ್ರ–ಕಲ್ಪನೆಗಳಿಂದ ಕೂಡಿ ಮನೋಹರವಾಗಿದ್ದು ಕವಿ ಹೃದಯವುಳ್ಳವಳೆಂದು" ಸಾರಿದ್ದಾರೆ.

**ಪ್ರಶ್ನೆಗಳು :**

೧. ದಾಸಿಮಯ್ಯನ ಹಸಿವು ಹೆಬ್ಬಾವಿಗಿಂತಲೂ ವಿಷಕಾರಿ ಎನ್ನಲು ಕಾರಣಗಳೇನು? ವಿವರಿಸಿ.
೨. ದಾಸಿಮಯ್ಯ 'ಮನದ ನೆನಪು' ಮಾತಾಗುವ ಬಗೆಯನ್ನು ಹೇಗೆ ತಿಳಿಸಿದ್ದಾರೆ?
೩. ಕಾಣದ–ಕೇಳದ ಮನದ ಭಾವ ನಡೆಯುವುದು ಹೇಗೆ ವಿವರಿಸಿ.
೪. ಅಲ್ಲಮ ಶಿವಶರಣರ ನಿರ್ಲಿಪ್ತತೆಯನ್ನು ಹೇಗೆ ತಿಳಿಸಿದ್ದಾರೆ.
೫. ಮನುಷ್ಯನ ಹುಟ್ಟುಗುಣ–ಸ್ವಭಾವಗಳನ್ನು ಮೀರುವ ಬಗೆ ಹೇಗೆಂದು ತಿಳಿಸಿದ್ದಾರೆ.
೬. ಅಲ್ಲಮ ಪ್ರಭು ವ್ಯಕ್ತಿನಿಷ್ಠ–ವಸ್ತುನಿಷ್ಠ ಸ್ವಭಾವಗಳನ್ನು ಹೇಗೆ ಚಿತ್ರಿಸಿದ್ದಾರೆ?
೭. ಬಸವಣ್ಣನವರು ಯಾವುದಕ್ಕೆ ಅಂಜುತ್ತಾರೆ ವಿವರಿಸಿ.
೮. ಬಸವಣ್ಣನು ಹೇಳುವ ಭೂತವಾಗಿ ಕಾಡುವ ವಿಷಯಗಾಳವುವು?
೯. ಅಕ್ಕ ಚಂದನ, ಸುವರ್ಣದ ಗುಣ–ಸ್ವಭಾವವನ್ನು ಹೇಗೆ ತಿಳಿಸಿದ್ದಾರೆ.
೧೦. ತನ್ನನ್ನು ಕೊಂದರು ಶರಣು ಎಂಬುದನ್ನು ಬಿಡೆನು ಎನ್ನಲು ಕಾರಣವೇನು? ವಿವರಿಸಿ.

*

# ೩. ಬಾರೋ ಸಾಧನಕೇರಿಗೆ

**– ಅಂಬಿಕಾತನಯದತ್ತ**

**ಆಶಯ :**

ಕವಿತೆಯಲ್ಲಿನ 'ಸಾಧನಕೇರಿ' ಬೇಂದ್ರೆಯವರು ವಾಸಮಾಡುತ್ತಿದ್ದ ಬಡಾವಣೆಯ ಹೆಸರೂ ಹೌದು. ಅವರ ಬಾಳಿನ ಏರಿಳಿತಗಳಿಂದ ಅನೇಕ ಊರುಗಳನ್ನು ಸುತ್ತಿದರೂ, ಅವರ ಜನ್ಮಭೂಮಿ–ಕರ್ಮಭೂಮಿಯಾದ ಈ ನೆಲದ ವರ್ಣನೆ, ಆಕರ್ಷಣೆ, ಕರೆಯೇ ಅವರ ಶಕ್ತಿ, ಸಾಧನೆ, ಸುಖ ಸಾಮರ್ಥ್ಯದ ಮೂಲ ಸೆಲೆಯ ತಾಣ. ಅದು ಅತ್ಯಂತ ಸಂಪದ್ಭರಿತವಾಗಿರುವ, ಪ್ರಕೃತಿಯ ಶ್ರೀಮಂತ ಭಂಡಾರವಾಗಿದ್ದು, ಶ್ರಾವಣದಲ್ಲಿ ಮತ್ತಷ್ಟು ಹಸಿರಾಗಿ, ಆ ಹಸಿರಿಗೆ ಸ್ವರ್ಗದ ದೈವತ್ವ ಪ್ರಾಪ್ತವಾಗಿ, ಅದರ ಲೀಲೆಗಳ ಚಿತ್ರಗಳನ್ನು ಬಿಡಿಸಿದ್ದಾರೆ.

'ಶ್ರಾವಣ ಕವಿ'ಯಾದ ಬೇಂದ್ರೆಯವರು, ತಮ್ಮ ಅಂತರಂಗದ ಸಾಧನೆಯ ಸ್ಫೂರ್ತಿಯೂ ಸಾಧನಕೇರಿಯಾಗಿದ್ದು, ದಿವ್ಯವಾದ ದೈವಿಕ ಮೋಹ ಮೋಕ್ಷಕ್ಕಿಂತ ಈ ಭೂಮಿಯ ಬಾಳು ಸಾಧನೆಯ ಸಾರ್ಥಕತೆ ಅತ್ಯಂತ ಶ್ರೇಷ್ಠವೆಂದು ಸಾರಿದ್ದಾರೆ.

ಬಾರೋ ಸಾಧನಕೇರಿಗೆ ।
ಮರಳಿ ನಿನ್ನೀ ಊರಿಗೆ ॥

ಮಳೆಯು ಎಳೆಯುವ ತೇರಿಗೆ
ಹಸಿರು ಏರಿದೆ ಏರಿಗೆ
ಹಸಿರು ಸೇರಿದೆ ಊರಿಗೆ
ಹಸಿರು ಚಾಚಿದೆ ದಾರಿಗೆ
ನಂದನದ ತುಣುಕೊಂದು ಬಿದ್ದಿದೆ.
ನೋಟ ಸೇರದು ಯಾರಿಗೆ? ॥ ಬಾರೋ.....



ಮಲೆಯ ಮೊಗವೇ ಹೊರಳಿದೆ
ಕೋಕಿಲಕೆ ಸವಿ ಕೊರಳಿದೆ
ಬೇಲಿಗೂ ಹೂ ಬೆರಳಿದೆ
ನೆಲಕೆ ಹರೆಯವು ಮರಳಿದೆ
ಭೂಮಿತಾಯ್ ಒಡಮುರಿದು ಎದ್ದಳೊ
ಶ್ರಾವಣದ ಸಿರಿ ಬರಲಿದೆ ॥ ಬಾರೋ...

ಮೋಡಗಳ ನೆರಳಾಟವು
ಅಡವಿ ಹೂಗಳ ಕೂಟವು
ಕೋಟಿ ಜೇನ್ನೊಣಕೂಟವು
ಯಕ್ಷಿ ಮಾಡಿದ ಮಾಟವು
ನೋಡು ಬಾ ಗುಂಪಾಗಿ ಪಾತರ–
ಗಿತ್ತಿ ಕುಣಿಯುವ ತೋಟವು ॥ ಬಾರೊ.....

ಮರವು ಮುಗಿಲಿಗೆ ನೀಡಿದೆ
ಗಿಡದ ಹೊದರೊಳು ಹಾಡಿದೆ
ಗಾಳಿ ಎಲ್ಲೂ ಆಡಿದೆ
ದುಗುಡ ಇಲ್ಲಿಂದೋಡಿದೆ
ಹೇಳು ಗೆಳೆಯಾ ಬೇರೆ ಎಲ್ಲೀ
ತರದ ನೋಟವ ನೋಡಿದೆ? ॥ ಬಾರೊ....

## ಕವಿ ಪರಿಚಯ

**ದ.ರಾ. ಬೇಂದ್ರೆ :** ದತ್ತಾತ್ರೇಯ ರಾಮಚಂದ್ರ ಬೇಂದ್ರೆ. ೧೮೯೬ ನೇ ಜನವರಿ ಧಾರವಾಡದಲ್ಲಿ ಜನನ. ಪ್ರೌಢಶಾಲಾ ಶಿಕ್ಷಕರಾಗಿ, ಕಾಲೇಜಿನ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಧಾರವಾಡ ಆಕಾಶವಾಣಿಯ ಸಲಹೆಗಾರರಾಗಿದ್ದರು. ೧೯೩೦ ರಲ್ಲಿ ಮೈಸೂರು ಲೇಖಕರ ಗೋಷ್ಠಿಯ ಅಧ್ಯಕ್ಷರಾಗಿದ್ದು, ಸಮ್ಮೇಳನಾಧ್ಯಕ್ಷ ಭಾಷಣವೇ ಸುಪ್ರಸಿದ್ಧ ಲೇಖನ– 'ಸಾಹಿತ್ಯದ ವಿರಾಟ್ ಸ್ವರೂಪ'. ೧೯೫೬ ಅರಳು–ಮರಳು ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಮೈಸೂರು, ಕರ್ನಾಟಕ, ಕಾಶೀ–ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್ ಪದವಿ ನೀಡಿ ಸನ್ಮಾನಿಸಿದವು. ೧೯೬೮ ರಲ್ಲಿ ರಾಷ್ಟ್ರದ 'ಪದ್ಮಶ್ರೀ, ಪ್ರಶಸ್ತಿ, ೧೯೭೪ ರಲ್ಲಿ 'ನಾಕುತಂತಿ' ಸಂಕಲನಕ್ಕೆ ಜ್ಞಾನ ಪೀಠ ಪ್ರಶಸ್ತಿ ಲಭಿಸಿದೆ.

ಮೂರ್ತಿ ಮತ್ತು ಕಾಮ ಕಸ್ತೂರಿ, ಅರಳು–ಮರಳು, ಗರಿ, ನಾದಲೀಲೆ, ನಾಕುತಂತಿ, ಕೃಷ್ಣಕುಮಾರಿ, ಸಖೀಗೀತೆ, ಉಯ್ಯಾಲೆ–ಕವನ ಸಂಕಲನಗಳು. ಕನ್ನಡ ಮೇಘದೂತ, ಚೀನಾದ ಬಾಳು ಬದುಕು, ಠಾಕೂರರ ನೂರೊಂದು ಕವನ ಅನುವಾದಗಳು. ಜಾತ್ರೆ, ಗೋಲ್, ತಿರುಕರತಿಗುಡು, ಸಾಯೋ ಆಟ ನಾಟಕಗಳು.

**ಪ್ರಶ್ನೆಗಳು :**

೧. ಬೇಂದ್ರೆಯವರ ಸಾಧನಕೇರಿಯ ವರ್ಣನೆಯನ್ನು ತಿಳಿಸಿ.

೨. ಶ್ರಾವಣಮಾಸದಲ್ಲಿ ಸಾಧನಕೇರಿ ಸ್ವರ್ಗವಾದ ಬಗೆ ಹೇಗೆ? ವಿವರಿಸಿ.

೩. ಇಳೆ ಎಂದರೆ ಬರಿ ಮಣ್ಣಲ್ಲ ಎನ್ನಲು ಕಾರಣವೇನು ತಿಳಿಸಿ.

೪. ಇಳೆ ನೀಡುವ ಅಮೃತ ಅನಂತ ಅಕ್ಷಯ ಫಲಗಳಾವುವು?

೫. ಮುಂಗಾರಿನ ಮಳೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ ತಿಳಿಸಿ.

೬. ಮುಂಗಾರಿನ ಮಳೆಯ ವರ್ಣನೆಯನ್ನು ವಿವರಿಸಿ.

*



# ೪. ಪ್ರೀತಿ ಇಲ್ಲದ ಮೇಲೆ

– ಜಿ.ಎಸ್. ಶಿವರುದ್ರಪ್ಪ

**ಆಶಯ :**

'ಪ್ರೀತಿ'ಯು ನಿಸರ್ಗದ ಸಹಜ ಭಾವ, ಬಂಧ, ಚೆಲುವು, ಪ್ರೇರಣೆಯೂ ಹೌದು ಸೃಷ್ಟಿಯ ಪ್ರತಿಫಲವು ಹೌದು. ದ್ಯಾವ–ಪೃಥ್ವಿ, ಗಂಡು–ಹೆಣ್ಣು, ಸಕಲ ಜೀವರಾಶಿಯ ಸಂಬಂಧ ಮತ್ತು ಚಲನಶೀಲ ಸೂತ್ರವೇ ಪ್ರೀತಿಭಾವ ಮೌಲ್ಯ. ಪ್ರಪಂಚದ ದೇಶಗಳ ನಡುವೆ ಪ್ರೀತಿಯಿದ್ದಾಗ, ಗಡಿಗಳು–ಯುದ್ಧ–ನಾಶದ ಪ್ರಶ್ನೆಯೇ ಇಲ್ಲ. ಧರ್ಮ–ಜಾತಿ–ವರ್ಣ–ಭಾಷೆಯ ವೈಷಮ್ಯತೀತಾ ಸಾಮರಸ್ಯ ಶಾಂತಿಯ ಬಾಳಿನ ಸೂತ್ರವೆಂದು ಸಾರಿದ್ದಾರೆ.

ಪ್ರೀತಿ ಇಲ್ಲದ ಮೇಲೆ–
ಹೂವು ಅರಳೀತು ಹೇಗೆ?
ಮೋಡ ಕಟ್ಟೀತು ಹೇಗೆ?
ಹನಿಯೊಡೆದು ಕೆಳಗಿಳಿದು
ನೆಲಕ್ಕೆ ಹಸಿರು ಮೂಡೀತು ಹೇಗೆ?

ಪ್ರೀತಿ ಇಲ್ಲದ ಮೇಲೆ–
ಮಾತಿಗೆ ಮಾತು ಕೂಡೀತು ಹೇಗೆ?
ಅರ್ಥ ಹುಟ್ಟೀತು ಹೇಗೆ?
ಬರೀ ಪದಕ್ಕೆ ಪದ ಜತೆಗಿದ್ದ ಮಾತ್ರಕ್ಕೆ
ಪದ್ಯವಾದೀತು ಹೇಗೆ?

ಪ್ರೀತಿ ಇಲ್ಲದ ಮೇಲೆ–
ದಕ್ಷಿಣಾಫ್ರಿಕದ ಕಗ್ಗತ್ತಲಿಗೆ
ಬೆಳಕು ಮೂಡೀತು ಹೇಗೆ?
ಸೆರೆಮನೆಯ ಕಂಬಿಯ ನಡುವೆ
ಕಮರುವ ಕನಸು ಕೊನರೀತು ಹೇಗೆ?

ಬಿಳಿ ಜನರ ಕರಾಳ ಕಪ್ಪು ಹೃದಯಕ್ಕೆ
ಕ್ರಿಸ್ತನ ಕರುಣೆ ಅರ್ಥವಾದೀತು ಹೇಗೆ?

ಪ್ರೀತಿ ಇಲ್ಲದ ಮೇಲೆ–
ಸಂಶಯದ ಗಡಿಗಳುದ್ದಕ್ಕು
ಸಿಡಿಗುಂಡುಗಳ ಕದನ ನಿಂತೀತು ಹೇಗೆ?
ಜಾತಿ–ಮತ–ಭಾಷೆ–ಬಣ್ಣಗಳ ಗೋಡೆಯ ನಡುವೆ
ನರಳುವ ಪಾಡು ತಪ್ಪೀತು ಹೇಗೆ?
ನಮ್ಮ ನಿಮ್ಮ ಮನಸ್ಸು
ಮರುಭೂಮಿಯಾಗದ ಹಾಗೆ
ತಡೆಗಟ್ಟುವುದು ಹೇಗೆ?

## ಕವಿ ಪರಿಚಯ

**ಜಿ.ಎಸ್. ಶಿವರುದ್ರಪ್ಪ :** ಜನನ ೧೯೨೬ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕಿನ ಈಸೂರಿನಲ್ಲಿ. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ನಿವೃತ್ತಿ. ಕುವೆಂಪುರವರ ಮಾರ್ಗದರ್ಶನದ ಸಂಶೋಧನಾ ಪ್ರೌಢ ಪ್ರಬಂಧ 'ಸೌಂದರ್ಯ ಸಮೀಕ್ಷೆ'ಗೆ ಮೈಸೂರು ವಿ.ವಿ.ಯಿಂದ ಡಾಕ್ಟರೇಟ್ ಪದವಿ ದೊರೆತಿದೆ. ವಿಮರ್ಶೆಯ ಪೂರ್ವ ಪಶ್ಚಿಮ, ಕಾವ್ಯಾರ್ಥ ಚಿಂತನ, ಮಹಾಕಾವ್ಯ ಸ್ವರೂಪ– ಗಂಭೀರ ಮೀಮಾಂಸ ಕೃತಿಗಳು. ಗತಿಬಿಂಬ, ಪರಿಶೀಲನ, ನವೋದಯ, ಕನ್ನಡ ಸಾಹಿತ್ಯ ಸಮೀಕ್ಷೆ, ಅನುರಣನ– ವಿಮರ್ಶಾ ಸಂಕಲನಗಳು. ಸಾಮಗಾನ, ನನ್ನ – ನಿನ್ನ ನಡುವೆ, ಕಾಡಿನ ಕತ್ತಲಲ್ಲಿ, ವೃತ್ತ, ಮಧ್ಯ, ಪ್ರೀತಿಯಿಲ್ಲದ ಮೇಲೆ– ಕವನ ಸಂಕಲನಗಳು. ಕರ್ಮಯೋಗಿ, ಕಾದಂಬರಿ ಮಾಸ್ಕೋದಲ್ಲಿ ಇಪ್ಪತ್ತೆರಡು ದಿನಗಳು, ಗಂಗೆಯ ಶಿಖರಗಳಲ್ಲಿ– ಪ್ರವಾಸ ಕಥನಗಳು. ಕಾವ್ಯಾರ್ಥ ಚಿಂತನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಾಸ್ಕೋದಲ್ಲಿ ಇಪ್ಪತ್ತೆರಡು ದಿನಗಳು– ಸೋವಿಯತ್ ಲ್ಯಾಂಡ್ ಪ್ರಶಸ್ತಿ ದೊರೆತಿದೆ. ಕರ್ನಾಟಕ ಸರ್ಕಾರ ಪ್ರತಿಷ್ಠಿತ 'ಪಂಪ' ಪ್ರಶಸ್ತಿ ನೀಡಿ ಗೌರವಿಸಿದೆ. 'ರಾಷ್ಟ್ರಕವಿ' ಗೌರವ ಪುರಸ್ಕೃತರು.

**ಪ್ರಶ್ನೆಗಳು :**

೧. ಪ್ರೀತಿಯು ಯುದ್ಧ–ಹಿಂಸೆ–ನಾಶ ನಿಲ್ಲಲು ಹೇಗೆ ಕಾರಣವಾಗುತ್ತದೆ?

೨. ಕವಿ ಪ್ರಕೃತಿಯಲ್ಲಿ ಪ್ರೀತಿಯನ್ನು ಹೇಗೆ ಚಿತ್ರಿಸಿದ್ದಾನೆ ತಿಳಿಸಿ.

*